(ಶ್ರೀ ಎಚ್. ಬಿ. ಜ್ವಾಲನಯ್ಯ)

ನೀರು ಪೂರೈಕೆ ಎಕ್ಸ್‌ಪ್ಯಾನಷನ್ ಯೋಜನೆಯನ್ನು ಸರ್ಕಾರಕ್ಕೆ ಕಳುಹಿಸಿ 6 ತಿಂಗಳಾಯಿತು. ಆದರೆ ಅದರ ಬಗ್ಗೆ ಇಲ್ಲಿಯವರೆಗೂ ಯಾವ ಒಂದು ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಆ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಎಲ್ಲೆಲ್ಲ ಪ್ಲಾನು ಮತ್ತು ಎಸ್ಟಿಮೇಟುಗಳು ತಯಾರಾಗಿ ಸರ್ಕಾರಕ್ಕೆ ಬಂದಿವೆ ಅವುಗಳ ಬಗ್ಗೆ ಬೇಗ ಶಿಫಾರಸ್ಸು ಮಾಡಬೇಕೆಂದು ನಲಕೆ ಕೊಟ್ಟಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೊಸದಾಗಿ ಬೆಂಗಳೂರು ಕಾರ್ಪೊರೇಷನ್ನಿಗೆ ಸೇರಿದಂತಹ ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಯಾವಯಾವ ಗ್ರಾಮಗಳಿಗೆ ಆಗಬೇಕು ಎನ್ನುವುದನ್ನು ಒಂದು ಕಾರ್ಯಕ್ರಮದ ಪ್ರಕಾರ ನಡೆಸುತ್ತಿದ್ದೀರಾ ? ಮತ್ತು ಮಾನ್ಯ ಮಂತ್ರಿಗಳು ಈ ಗ್ರಾಮಗಳು ದುರವಸ್ಥೆಯನ್ನು ಖುದ್ದಾಗಿ ನೋಡಿ ಕುಡಿಯುವ ನೀರು ಮತ್ತು ಒಳ ಚರಂಡಿ ವ್ಯವಸ್ಥೆಯನ್ನು ಆದಷ್ಟು ಬೇಗ ಆ ಗ್ರಾಮಗಳಿಗೆ ಒದಗಿಸಿಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಈ ಬಗ್ಗೆ ಹೇಳಿದ್ದೇನೆ ಬೆಂಗಳೂರು ಕಾರ್ಪೋರೇಷನ್ನಿಗೆ 34 ಗ್ರಾಮಗಳನ್ನೇನು ಸೇರಿಸಿಕೊಂಡಿದ್ದೇವೆ, ಅವುಗಳು ಬಹಳ ಸುಧಾರಣೆಯಾಗಿವೆ. ನಾನು ಆ ಗ್ರಾಮಗಳಿಗೆ ಹೋಗಿ ನೋಡಿದ್ದೇನೆ ಅಲ್ಲಿ ಸಾಕಷ್ಟು ಇಂಪ್ರೂವ್‌ಮೆಂಟ್ ನಡೆಯುತ್ತಿದೆ. ನೀರು ಕೊಟ್ಟಿದ್ದೇವೆ, ರಸ್ತೆಗಳಿಗೆ ಆಸ್‌ಫಾಲ್ಟ್ ಮಾಡಿದ್ದೇವೆ, ಈ ಬಗ್ಗೆ ನಾವು ಒಂದು ಕನ್‌ನಲ್ಟೇಟೀವ್ ಕಮಿಟಿ ಮಾಡಿದ್ದೇವೆ. ಒಂದು ಫೇಜ್ಡ್ ಪ್ರೋಗ್ರಾಮ್ ಮಾಡಿದೆ ಅದರ ಪ್ರಕಾರ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಈಗ ತಾವು ಒಂದು ಫೇಜ್ಡ್ ಪ್ರೋಗ್ರಾಮ್ ಮಾಡಿದ್ದೇವೆ ಎಂದು ಈ ಸಭೆಗೆ ತಿಳಿಸಿದಿರಿ ಅದರ ಪ್ರಕಾರ ಈಗ ಸರ್ಕಾರದವರು 20 ಲಕ್ಷ ರೂಪಾಯಿಗಳನ್ನೇನು ಈ ಗ್ರಾಮಗಳಿಗೆ ನೀರು ಸರಬರಾಜು ಇನ್ನಿತರ ಸೌಕರ್ಯಗಳನ್ನು ಒದಗಿಸಲು ಮಂಜೂರು ಮಾಡಿದ್ದೀರಿ ಅದರಲ್ಲಿ ಈ ಫೇಜ್ಡ್ ಪ್ರೋಗ್ರಾಮಿಗೆ ಇಲ್ಲಿವರೆಗೆ ಎಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ಉಳಿದಿದೆ ಎಷ್ಟು ವರ್ಷಗಳಲ್ಲಿ ಪ್ರೋಗ್ರಾಮ್ ಕಾರ್ಯಗತವಾಗುತ್ತದೆ, ಎಷ್ಟು ಹಳ್ಳಿಗಳಿಗೆ ಈ ಸೌಕರ್ಯಸಿಕ್ಕುತ್ತದೆ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಆಮುಗೋಡಿ, ತಾಯಪ್ಪನಪಾಳ್ಯ, ವೈಯ್ಯಾಳಕಾವಲು, ಕೇತಸಾರನ ಹಳ್ಳಿ, ಅಗ್ರಹಾರ, ನಾಗನಪಾಳ್ಯ ಇತ್ಯಾದಿ 11 ಹಳ್ಳಿಗಳಿಗೆ ನೀರನ್ನು ಕೊಟ್ಟಿದೆ, 1970-71ನೇ ಸಾಲಿಗೆ ಯಡಿಯೂರು, ಲಕ್ಕಸಂದ್ರ, ನಾಗಸಂದ್ರ, ಅಶೋಕನಗರ, ಜಪರಪ್ಪನ ಪಾಳ್ಯ, ಗವಿಪುರ, ದಾಸರಹಳ್ಳಿ ಇತ್ಯಾದಿ 14 ಹಳ್ಳಿಗಳಿಗೆ ನೀರನ್ನು ಕೊಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

Land granted to Sri K. T. Shamaiah Gowda in Sindhuvadi Village

108. Sri N. G. HALAPPA (Channagiri).—

Will the Minister for Revenue be pleased to state:—

(*a*) whether any land has been granted to Sri K. T. Shamaiah Gowda. Ex-M. L. C. in Sindhuvadi Village, Thirthahalli Taluk, Shimoga District ;

(*b*) if so, the date of grant, the survey number of the lands, the extent of land granted and whether the grant is in accordance with law that was obtaining at the time of grant ;

(*c*) the extent of land owned by Sri K. T. Shamaiah Gowda besides the land granted in question ;

(*d*) whether Sri K. T. Shamaiah Gowda has unauthorisedly cultivated vast extent of land in the said survey number, if so, the extent of unauthorised cultivation and since when ;

(*e*) whether any T. T. fine has been levied and if so, the total amount of T. T. that is due from him ;

(*f*) whether any proceedings has been taken to recover the T.T. fine from him ;

(*g*) whether Sri K. T. Shamiah Gowda will be evicted from the land in question and the land be granted to Harijans and other landless persons in accordance with law?

Sri H. V. KOUJALGI (Minister for Revenue). —

(*a*) Yes.

(*b*) *Date of Grant*	*S.No.*	*Extent granted*
(1) 26-3-57	55/1 (85)	16-01 Acres
(2) 31-10-63	(55)	13-33 do

The grants of land were made according to the Rules then in force.

	A. G.
(*c*)	33-00

(*d*) Yes.

Details:

Extent	*Year*
A. G	
13-10	1965-66
13-10	1966-67
32-00	1967-68
32-00	1968-69

(*e*) Yes. Rs. 30,971-82.

(*f*) Yes.

(*g*) Action is being taken as per Rules.

ಶ್ರೀ ಎನ್. ಜಿ. ಹಾಲಪ್ಪ.—ಸ್ಪೀಕರ್, ಶ್ರೀಮಾನ್ ಕೆ. ಟಿ. ಶಾಮಯ್ಯಗೌಡರಿಗೆ ಸುಮಾರು 30 ಎಕರೆ ಜಮೀನನ್ನು ಕೊಟ್ಟಿದ್ದೀರಿ, ಬಗರ್ ಹುಕುಂ ಮಾಡಿರತಕ್ಕ ಕೆಲವರನ್ನು ಜಮೀನಿಂದ ಎವಿಕ್ಷನ್ ಮಾಡಿಸಿದ್ದೀರಿ, ಆದರೆ ಅವರು ಬಗರ್ ಹುಕುಂ ಮಾಡಿರತಕ್ಕ 32 ಎಕರೆ ಜಮೀನಿನಿಂದ ಏತಕ್ಕೆ ಇವರನ್ನು ಎವಿಕ್ಷನ್ ಮಾಡಲಿಲ್ಲ?

†ಶ್ರೀ ಎಚ್. ವಿ. ಕೌಜಲಗಿ.— ಇಲ್ಲಿಯವರೆಗೂ ಯಾರೇ ಬಗರ್ ಹುಕುಂ ಮಾಡಿದರೂ ಅವರಿಗೆ ಟಿ.ಟಿ. ಹಾಕುವ ಪದ್ಧತಿ ಇತ್ತು. ಅದನ್ನು ಮಾಡಿದ್ದೇವೆ. ಇನ್ನು ಮುಂದೆ ಎವಿಕ್ಷನ್ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಜಿ. ಹಾಲಪ್ಪ.— ಸ್ಪೇಟ್ ಫಾರೆಸ್ಟಿನಲ್ಲಿ ಶ್ರೀಮಾನ್ ಕೆ. ಟಿ. ಶಾಮಯ್ಯಗೌಡರಿಗೆ 33 ಎಕರೆ ಜಮೀನು ಇದೆ; ಮತ್ತು, ತುಂಗಾ ಮತ್ತು ಭದ್ರಾ ಪ್ರಾಜೆಕ್ಟಿನ ಕೆಳಗೆ ಸುಮಾರು 60 ಎಕರೆ ಇರಿಗೇಟೆಡ್ ಲ್ಯಾಂಡ್ ಇದೆ. ಹೀಗಿದ್ದರೂ ಕೂಡ ಮತ್ತೆ ಇವರಿಗೆ ಸ್ಪೇಟ್ ಫಾರೆಸ್ಟಿನಲ್ಲಿ ಜಮೀನು ಕೊಟ್ಟಿದ್ದೀರಿ, ಇವರಿಗಿಂತಲೂ ಮೊದಲು ಸ್ಪೇಟ್ ಫಾರೆಸ್ಟಿನಲ್ಲಿ ಜಮೀನು ಕೊಡಬೇಕೆಂದು ಅರ್ಜಿಯನ್ನು ಕೊಟ್ಟವರಿಗೆ ಜಮೀನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಕೆಲವು ದಿವಸಗಳ ನಂತರ ಮತ್ತೆ ಶ್ರೀಮಾನ್ ಕೆ. ಟಿ. ಶ್ಯಾಮಯ್ಯಗೌಡರಿಗೆ ಜಮೀನು ಕೊಡುವುದಕ್ಕೆ ಕಾರಣವೇನು?

ಶ್ರೀ ಎಚ್. ವಿ. ಕೌಜಲಗಿ.— 1962ನೇ ಇಸವಿಯಲ್ಲಿ ಯಾರು ಅವರಿಗೆ ಈ ರೀತಿ ಜಮೀನು ಕೊಟ್ಟರು ಎಂಬುದನ್ನು ಈಗ ಹೇಳುವುದಕ್ಕೆ ಕಷ್ಟವಾಗುತ್ತದೆ.

Sri G. CHANDRAKANTH.— In leply to (*e*) it is stated that a sum of Rs. 30,971-82 is due from Sri K. T. Shamiah Gowda. What compelled the Government not to recover this amount for the past five years?

Sri H. V. KOUJALGI.— Action is being taken to recover the amount as per rules.

ಶ್ರೀ ಎನ್. ಜಿ. ಹಾಲಪ್ಪ.— ಈ ಮಾನ್ಯ ಸದಸ್ಯರು ಅನಧಿಕೃತವಾಗಿ ಸಾಗುವಳಿ ಮಾಡಿದ ಜಮೀನಿನಲ್ಲಿ ಮಾಲ್ಕಿ ಎಷ್ಟು ಇತ್ತು, ಮತ್ತು, ಮಾಲ್ಕಿ ಜಮೀನನ್ನು ಸಾಗುವಳಿ ಮಾಡಿದ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳರಾಗಿದೆಯೇ?

ಶ್ರೀ ಎಚ್. ವಿ. ಕೌಜಲಗಿ.— ಮಾಲ್ಕಿ ಜಮೀನನ್ನು ವ್ಯವಸಾಯಕ್ಕೆ ಅನಧಿಕೃತವಾಗಿ ಉಪಯೋಗಿಸಿಕೊಳ್ಳಬಾರದೆಂದು ತಹಶೀಲ್‌ದಾರರು ನೋಟೀಸ್ ಕೊಟ್ಟಿದ್ದರು. ಮಾಲ್ಕಿ ಜಮೀನನ್ನು ಅವರು ಉಪಯೋಗಿಸಿಕೊಂಡ ಬಗ್ಗೆ ಜುರ್ಮಾನೆಯನ್ನು ಅರಣ್ಯ ಇಲಾಖೆಯವರು ವಸೂಲಿ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಅರಣ್ಯ ಇಲಾಖೆಯವರನ್ನು ಕೇಳಬೇಕಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.— ಹೊಸ ಲ್ಯಾಂಡ್ ಗ್ರಾಂಡ್ಸ್ ರೂಲ್ಸ್ ಪ್ರಕಾರ ಅನಧಿಕೃತವಾಗಿ ಯಾರು ಸರ್ಕಾರೀ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೋ ಅವರಿಗೆ ಕಾಯಂ ಮಾಡಬೇಕಾಗುತ್ತದೆ. ಅದರಂತೆ ಇವರಿಗೂ ಕೂಡ ಕಾಯಂ ಮಾಡುತ್ತಿರೋ ಅಥವಾ ಈಗಿನ ರೂಲ್ಸನ್ನು ಅಮೆಂಡ್‌ಮೆಂಟ್ ಮಾಡಿ ಇವರು ಅನಧಿಕೃತವಾಗಿ ಸಾಗುವಳಿ ಮಾಡಿರುವುದನ್ನು ವಾಪಸ್ ತೆಗೆದುಕೊಳ್ಳುತ್ತೀರೋ?

ಶ್ರೀ ಎಚ್. ವಿ. ಕೌಜಲಗಿ.— ಈಗ 94ನೇ ಸೆಕ್ಷನನ್ನು ಅಮೆಂಡ್‌ಮೆಂಟ್ ಮಾಡಲಾಗಿದೆ, ಅದರ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಬಾಕಿ ಇರುವ ತಕರಾರು ತಃಖ್ತೆಯ ಮೊಬಲಗು 30 ಸಾವಿರ ಚಿಲ್ಲರೆ ರೂಪಾಯಿಗಳು ಎಂದು ಹೇಳಿದ್ದೀರಿ. ಇದುವರೆಗೆ ಎಷ್ಟು ಹಣವನ್ನು ಈ ಪೈಕಿ ವಸೂಲಿ ಮಾಡಿದ್ದೀರಿ ಮತ್ತು ಕಾನೂನು ಬಾಹಿರವಾಗಿ ಜಮೀನನ್ನು ಸಾಗುವಳಿ ಮಾಡಿರುವುದರಿಂದ ಇವರ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ?

ಶ್ರೀ ಎಚ್. ವಿ. ಕೌಜಲಗಿ.— ಉಗ್ರ ಅಥವಾ ಸಾಮ್ಯ ಎಂದು ಹೇಳುವುದಕ್ಕೆ ಬರುವುದಿಲ್ಲ. ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕಾರ್ಯಕ್ರಮ ಕೈಕೊಳ್ಳುತ್ತೇವೆ.

Sri D. B. KALMANKAR.—Supplementary to (*g*) may I know what specific action is being taken to evict him and grant the lands to landless Harijans?

Sri H. V. KOUJALGI.— Action will have to be taken under the amended section 94 of the Mysore Land Revenue Act.

ಶ್ರೀ ಎ. ರಾಮಚಂದ್ರ.— ಶ್ರೀ ಕೆ. ಟಿ. ಶಾಮಯ್ಯಗೌಡರು ನಿಮ್ಮ ಪಕ್ಷದವರೋ ಅಥವಾ ಬೇರೆ ಪಕ್ಷಕ್ಕೆ ಸೇರಿದವರೋ?

ಶ್ರೀ ಎಚ್. ವಿ. ಕೌಜಲಗಿ.— ಅವರ ಪರಿಚಯ ನನಗಿಲ್ಲ.

Sri M. MALLAPPA.— Since how long the fine is pending recovery and what actual proceedings have been instituted against the party for recovery of this T.T. fine ?

Sri H. V. KOUJALGI.— From the answers given it is clear that the T.T. fine has been levied from time to time as the encroachments were detected and proceedings are also going on for its recovery.

ಶ್ರೀ ಎಂ. ನಾಗಪ್ಪ.— (ಬಿ) ಪ್ರಶ್ನೆಗೆ ಉತ್ತರವಾಗಿ ಎಷ್ಟು ಎಕರೆ ಜಮೀನು ಕೊಡರಾಗಿದೆ ಎಂಬುದನ್ನು ಹೇಳಿದ್ದೀರಿ. ಮತ್ತು ನಿಯಮಗಳಿಗನುಗುಣವಾಗಿ ಮಂಜೂರ್ಮಾಡರಾಗಿದ್ದಿತು ಎಂದು ಸಹ ಹೇಳಿದ್ದೀರಿ. ಈಗಿನ ರೂಲ್ಸ್ ಪ್ರಕಾರ ಎಷ್ಟು ಎಕರೆ ಜಮೀನನ್ನು ಒಬ್ಬರಿಗೆ ಕೊಡುವುದಕ್ಕೆ ಅವಕಾಶವಿದೆ ಎಂಬುದನ್ನು ತಿಳಿಸಬೇಕು. 94 (ಎ) ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ, ಈ ರೂಲ್ಸ್ ಪ್ರಕಾರ ಯಾರಿಗೆ ಜಮೀನು ಇದೆಯೋ ಅಂತಹವರಿಗೆ ಅನಧಿಕೃತವಾಗಿ ಸಾಗುವಳಿ ಮಾಡಿದ ಜಮೀನನ್ನು ಕಾಯಂ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಅನಧಿಕೃತವಾಗಿ ಸಾಗುವಳಿ ಮಾಡಿದ ಜಮೀನನ್ನು ಕೂಡಲೇ ಸ್ವಾಧೀನಪಡಿಸಿಕೊಳ್ಳುತ್ತೀರೋ ಅಥವಾ ಎಕ್ಸ್ ಎಂ.ಎಲ್.ಸಿ. ಎಂಬ ಕಾರಣದಿಂದ ರಕ್ಷಣೆ ಕೊಡುತ್ತೀರೋ?

ಶ್ರೀ ಎಚ್. ವಿ. ಕೌಜಲಗಿ.— 1962ನೇ ಇಸವಿಯಲ್ಲಿ ಇಷ್ಟೇ ಜಮೀನು ಕೊಡಬೇಕೆಂಬ ನಿಯಮವಿರಲಿಲ್ಲ. ಕಾಫೀ ಬೆಳೆಗಾಗಿ ಜಮೀನು ಬೇಕೆಂಬ ಮನವಿಗಳೂ ಕೂಡ ಆಗ ಬರುತ್ತಿರಲಿಲ್ಲ. ಮತ್ತು ಆಗ ಕಿಮ್ಮತ್ತು ಕೂಡ ಎಕರೆಗೆ 100 ರೂ. ಗಳಿತ್ತು. 1967ನೇ ಇಸವಿಯಿಂದ ಜಮೀನಿನ ಬೇಡಿಕೆ ಹೆಚ್ಚಿದೆ. ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೂ ಕೂಡ 94 (ಎ) ಪ್ರಕಾರ ಜಿಲ್ಲಾಧಿಕಾರಿಯವರೇ ತೆಗೆದುಕೊಳ್ಳಬೇಕಾಗುತ್ತದೆ. ಅವರು ತೆಗೆದುಕೊಳ್ಳುತ್ತಾರೆ. ಅವರಿಗೆ ಯಾವುದೇ ರೀತಿಯ ಆಶ್ರಯ ಕೊಟ್ಟಿಲ್ಲ.

Sri D. M. SIDDIAH. Is it not the policy of the Government to give land to persons who have no land and if so, will the Government make a survey of all the persons who have taken lands though they possessed lands and confiscate them and see that they are distributed to landless people?

Sri H. V. KOUJALGI.—That is the policy of the Governmenf and that has been followed.

ಶ್ರೀ ಬೋಳಾ ರಘುರಾಮಶೆಟ್ಟಿ.— 1966-67ರಲ್ಲಿ 13 ಎಕರೆಯಷ್ಟು ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ್ದರೆ, 1967-68ರಲ್ಲಿ 32 ಎಕರೆಯಷ್ಟು ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ್ದಾರೆ. ಈ ರೀತಿ ಮಾಡಿದ್ದು ಸರ್ಕಾರಕ್ಕೆ ಯಾವಾಗ ತಿಳಿದುಬಂತು ಮತ್ತು ಅವರಮೇಲೆ ಕ್ರಮ ತೆಗೆದುಕೊಂಡಿದ್ದು ಯಾವಾಗ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ನಮ್ಮ ರೆವೆನ್ಯೂ ಸರ್ವೆ ಆಫೀಸರ್ ಅವರು ಸರ್ವೆ ಮಾಡುವುದಕ್ಕೆ ಹೋದಾಗ ಅನಧಿಕೃತವಾಗಿ ಸಾಗುವಳಿ ಮಾಡಿರುವುದು ಕಂಡುಬಂತು. ಆ ರೀತಿ ಕಂಡುಬಂದ ಕೂಡಲೇ ಅವರಿಗೆ ನೋಟೀಸ್ ಕೊಟ್ಟು ಕ್ರಮ ತೆಗೆದುಕೊಂಡಿದ್ದೇವೆ. ಆದರೆ ಕ್ರಮ ತೆಗೆದುಕೊಳ್ಳುವುದು ಸ್ವಲ್ಪ ನಿಧಾನವಾಗಿದೆ.

ಶ್ರಿ ಕೆ. ಎಚ್. ರಂಗನಾಥ.—ಪಿ.ಎಸ್.ಪಿ. ಮತ್ತು ಎಸ್.ಎಸ್.ಪಿ. ಪಾರ್ಟಿಯವರು ಭೂ-ಗ್ರಹಣ ಚಳುವಳಿ ಮಾಡಿದ್ದಕ್ಕೆ ಅವರ ಮೇಲೆ ಕೇಸ್ ಹಾಕಿದ್ದೀರಿ. ಈ ಮಾನ್ಯ ಸದಸ್ಯರು ಒಳಗಿಂದೊಳಗೇ 1965 ರಿಂದ 1969ರ ವರೆಗೆ ಭೂ-ಗ್ರಹಣ ಮಾಡಿದ್ದಾರೆ. ಆದ್ದರಿಂದ ಇವರ ಮೇಲೂ ಕೂಡ ಕೇಸ್ ಹಾಕುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅನಧಿಕೃತ ಸಾಗುವಳಿ ಮಾಡಿದ್ದಾರೆಂಬುದು ಕ್ರಮೇಣ ಗೊತ್ತಾದಮೇಲೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಎಂ.ಎಲ್.ಎ., ಎಂ.ಎಲ್.ಸಿ., ಮತ್ತು ಎಂ.ಪಿ. ಗಳಿಗೆ ಜಮೀನನ್ನು ಮಂಜೂರು ಮಾಡುತ್ತಿದ್ದೀರಿ. ಇಂತಹವರಿಗೆ ಜಮೀನು ಮಂಜೂರು ಮಾಡಲು ಒಂದು ಪಾಲಿಸಿಯನ್ನು ಕೂಡ ಮಾಡಿಕೊಂಡಿದ್ದೀರಿ. ಆದರೆ ಇದೇ ಸ್ಥಾನಸಭೆಯ ಅನೇಕ

(ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್)

ಹರಿಜನ ಸದಸ್ಯರು ಜಮೀನು ಬೇಕೆಂದು ಕಳೆದ 3 ವರ್ಷಗಳಿಂದಲೂ ಕೂಡ ಕೇಳಿಕೊಂಡಿದ್ದರೂ ಕೂಡ ಮಂಜೂರು ಮಾಡಿಲ್ಲ. ಒಬ್ಬರಿಗೆ ಮಂಜೂರು ಮಾಡಿ ಇನ್ನೊಬ್ಬರಿಗೆ ಮಂಜೂರು ಮಾಡದಿರಲು ಕಾರಣವೇನು ?

ಶ್ರೀ ಎಚ್. ವಿ. ಕೌಜಲಗಿ.— ಹರಿಜನ ಸದಸ್ಯರಿಗೆ ಜಮೀನು ಕೊಡಬಾರದು ಎಂಬ ನಿಯಮವೇನೂ ಇಲ್ಲ. ಯೋಗ್ಯತೆ ಇದ್ದವರಿಗೆ ಕೊಡುತ್ತಿದ್ದೇವೆ. ಆದರೆ ಈ ಕೇಸ್‌ನಲ್ಲಿ ಅನಧಿಕೃತವಾಗಿ ಸಾಗುವಳಿಯಾಗಿದೆ.

ಶ್ರೀ ಹೆಚ್. ಸಿದ್ದವೀರಪ್ಪ.—ಪ್ರತಿ ವರ್ಷವೂ ಇಂತಹ ಅಕ್ರಮವಾದ ಅಕ್ರಮಣ ಬರುತ್ತಲೇ ಇದೆ. 1965-66 ರಿಂದ ಅಕ್ರಮವಾಗಿ ಅಕ್ರಮಣ ಮಾಡಿಕೊಂಡಿರುವವರು ಸುಮಾರು ನೂರು ಜನರು ನಿಮ್ಮಲ್ಲಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇವರಿಗೆರ್ಲಾ ನೂಕ್ತ ಮರ್ಯಾದೆ ಮಾಡುವ ನಿಟ್ಟಿನಲ್ಲಿ ಇವರೆಲ್ಲರಿಗೂ ರಾಜ್ಯಮಟ್ಟದ ಪ್ರಶಸ್ತಿಯನ್ನು ಕೊಡಲು ಸರ್ಕಾರದವರ ಯೋಚನೆ ಮಾಡುತ್ತಾರೆಯೇ ?

(ಉತ್ತರ ಇಲ್ಲ)

9-00 A.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1965-66ರಿಂದಲೂ ಆಗಿದ್ದ ರೆವೆನ್ಯೂ ಮಂತ್ರಿಗಳು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರಿಗೆ ಅದನ್ನು ಸಮಂಜಸವಾಗಿ ಮಾಡಲು ಅನುಕೂಲವಾಗುವಂತೆ ಅವರಿಗೇ ಅದನ್ನು ಕೊಡುವಂತೆ ಏರ್ಪಾಡು ಮಾಡಿದ್ದಾರೆ. ಇದೂ ಅಲ್ಲದೆ ಕಾಫೀ ಬೆಳೆ ಬೆಳೆಯುವವರಿಗೆ ಬೇರೆ ಭೂಮಿಯನ್ನು ಸುಲಭ ಧರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಇವಕ್ಕೆಲ್ಲಾ ರ್ಯಾಂಡ್ ಗ್ರಾಂಟು ರೂಲ್ಸ್‌ನಲ್ಲಿ ವಿನಾಯಿತಿಗಳನ್ನು ಕೂಡ ಕೊಡರಾಗಿದೆ. ಇಷ್ಟೇ ಅಲ್ಲದೆ ಸರಕಾರಕ್ಕೆ ಯಾರು ಬೆಂಬಲ ಕೊಡುತ್ತಿದ್ದಾರೋ ಅಂತವರಿಗೆ ಅನುಕೂಲ ಮಾಡುವ ನಿಟ್ಟಿನಲ್ಲಿ ಭೂಮಿಯನ್ನು ಅಕ್ರಮವಾಗಿ ಅಕ್ರಮಣ ಮಾಡಿಕೊಂಡಿದ್ದರೂ ಅವರಿಗೇ ಅನುಕೂಲಗಳನ್ನು ಮಾಡಬೇಕೆಂದು ಈ ರೀತಿ ಮಾಡುತ್ತಿದ್ದಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಅಕ್ರಮವಾಗಿ ಭೂಮಿಯನ್ನು ಅಕ್ರಮಣ ಮಾಡಿರುವವರಿಗೇ ಭೂಮಿಯನ್ನು ಕೊಡಬೇಕೆಂದು ಎಲ್ಲೂ ಹೇಳಲಿಲ್ಲ. ಯೋಗ್ಯವಾದ ಸಂದರ್ಭಗಳಲ್ಲಿ ಸೆಕ್ಷನ್ 94ರ ಪ್ರಕಾರ ಭೂಮಿಯನ್ನು ಕೊಡಲು ಅವಕಾಶ ಇದೆ. ಅದರಂತೆ ಕೊಡಬಹುದು.

Sri D. M. SIDDIAH.—Sir, the Hon. Minister was pleased to say what is the policy of the Government. Honesty is the best policy. But it has to be implemented. If the land cannot be confiscated, can he not be evicted from the land and cannot the same land be given to landless people ? Will the Government implement this policy ?

Sri H. V. KOUJALGI.—As I have already said that is the policy and that will be implemented.

ಶ್ರೀ ಎನ್ ಜಿ. ಹಾಲಪ್ಪ.—1967-68 ರಲ್ಲಿ ಹಾಗೂ 1968-69 ರಲ್ಲಿ ಸುಮಾರು 32 ಎಕರೆ ಗಳಷ್ಟು ಭೂಮಿಯನ್ನು ಬಗರ್ ಹುಕುಂ ಸಾಗು ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಇದನ್ನು ಸರಿಯಾಗಿ ಅಳತೆ ಮಾಡಲು ಒಬ್ಬರು ಸ್ಪೆಷಲ್ ಸರ್ವೇಯರನ್ನು ನೇಮಕಾದರೂ ಕಳುಹಿಸುತ್ತೀರಾ ? ಇದರ ಬಗ್ಗೆ ಶ್ರೀ ಡಿ. ಕೃಷ್ಣಮೂರ್ತಿ ಎನ್ನುವ ನಮ್ಮ ಕಡೆ ಪಕ್ಷೇತರರು ಒಂದು ರೀತಿಯಾಗಿ ಸೋಷಿಯಲಿಸಂ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದರು. Mine is Mine, yours also is mine ಎನ್ನುವಂತೆ ತಾವು ಇಲ್ಲಿ ಅವಕಾಶ ಕೊಡುತ್ತಿದ್ದೀರಾ ಹೇಗೆ ?

Sri H. V. KOUJALGI.—Sir, what figures have been shown in this answer as encroached, it is an approximate figure. Steps are taken for the actual measurement of the area that is encroached upon.